ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಗುಂಡ್ಲುಪೇಟೆ

**ಸಿಸಿ ನಂಃ 433/2019**

| | | |
|---|---|---|
| ಸಾಕ್ಷಿದಾರರ ಹೆಸರು | ರಮಣಿ ಎಂ.ಕೆ. | ಪ್ರಮಾಣ ವಚನ ಬೋಧಿಸಿದ ದಿನಾಂಕಃ 10.10.2025 |
| ತಂದೆಯ ಹೆಸರು/ ಗಂಡನ ಹೆಸರು | ಜಿ.ಪ್ರಕಾಶ್ | |
| ವಯಸ್ಸು | 62 ವರ್ಷ | |
| ಉದ್ಯೋಗ | ನಿವೃತ್ತ ನೌಕರರು | ಪ್ರಾಸಾಃ 1 |
| ವಾಸ | ಮೈಸೂರು | ಚಾಸಾಃ 1 |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿರವರಿಂದಃ ಕಲಂ 299 ಸಿ.ಆರ್.ಪಿ.ಸಿ ರಡಿಯಲ್ಲಿ**

ನಾನು 2015 ರಿಂದ ಸೆಪ್ಟೆಂಬರ್ 2019 ರವರೆಗೆ ಆಹಾರ ನಿರೀಕ್ಷಕರಾಗಿ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಗಂಡ್ಲುಪೇಟೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 18.07.2019 ರಂದು ಬೆ. 11.00 ಗಂಟೆ ಸಮಯದಲ್ಲಿ ನಾನು ಕಛೇರಿಯಲ್ಲಿ ಇದ್ದಾಗ, ತೆರಕಣಾಂಬಿ ಕಡೆಯಿಂದ ಗುಂಡ್ಲುಪೇಟೆ ಮಾರ್ಗವಾಗಿ ಕೇರಳಕ್ಕೆ ಓಮಿನಿ ಕಾರ್ ನಲ್ಲಿ ಪಡಿತರ ಅಕ್ಕಿಯನ್ನು ಸಾಗಾಣಿಕೆ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದ ಮೇರೆಗೆ ಗುಂಡ್ಲುಪೇಟೆ ಪೊ.ಠಾಣೆಗೆ ಭೇಟಿ ನೀಡಿ ಈ ವಿಷಯವನ್ನು ಪಿ.ಎಸ್.ಐ ರವರ ತಿಳಿಸಿ ನಂತರ ಪಿ.ಎಸ್.ಐ ರವರು ಅವರ ಸಿಬ್ಬಂದಿಯವರನ್ನು ಜೊತೆಯಲ್ಲಿ ಕರೆದುಕೊಂಡು ನನ್ನನ್ನು ಸಹ ಜೀಪ್ ನಲ್ಲಿ ಕರೆದುಕೊಂಡು ಶಿವಾನಂದ ಸರ್ಕಲ್ ಹತ್ತಿರ ಹೋಗಿ ಅಲ್ಲಿ ಇಬ್ಬರು ಪಂಚ ಸಾಕ್ಷಿದಾರರನ್ನು ಬರಮಾಡಿಕೊಂಡು ಕಾಯುತ್ತಾ ನಿಂತಿದ್ದಾಗ, ಸು. ಬೆ. 11.15 ಗಂಟೆ ಸಮಯಕ್ಕೆ ತೆರಕಣಾಂಬಿ ಕಡೆಯಿಂದ ಗುಂಡ್ಲುಪೇಟೆ ಕಡೆಗೆ ಬಂದ ಓಮಿನಿ ಕಾರ್ ನ್ನು ಪೊಲೀಸ್ ಸಿಬ್ಬಂದಿಯವರು ತಡೆದು ನಿಲ್ಲಿಸಿ ನೋಡಲಾಗಿ ಅದರ ನೋಂದಣಿ ಸಂಖ್ಯೆ ಕೆಎಲ್–08–ಎನ್–1888 ಎಂದು ಇರುತ್ತದೆ. ನಂತರ ಕಾರಿನ ಒಳಗಡೆ ಪರಿಶೀಲಿಸಲಾಗಿ ಅಕ್ಕಿ ಮೂಟೆಗಳು ಇರುವುದು ಕಂಡು ಬಂದಿರುತ್ತದೆ. ಅದರ ಚಾಲಕನನ್ನು ಅಕ್ಕಿ ಸಾಗಿಸಲು ದಾಖಲೆಗಳನ್ನು ಕೇಳಲಾಗಿ ಯಾವುದೇ ದಾಖಲೆಗಳನ್ನು ನೀಡಿರುವುದಿಲ್ಲ. ಆತನ ಹೆಸರನ್ನು ಕೇಳಲಾಗಿ ಹರ್ಷದ್ ಹಾಗೂ ಕಾರಿನ ಹಿಂದೆ ಇದ್ದ ಇನ್ನೊಬ್ಬ ವ್ಯಕ್ತಿಯ ಹೆಸರನ್ನು ಕೇಳಲಾಗಿ ಮಧುಸೂಧನ್ ಎಂದು ತಿಳಿಸಿರುತ್ತಾರೆ. ನಂತರ ಮೂಟೆಗಳಲ್ಲಿ ಇರುವ ಅಕ್ಕಿಯನ್ನು ಬಿಚ್ಚಿಸಿ ನೋಡಲಾಗಿ ಪಡಿತರ ಚೀಟಿಗೆ ವಿತರಣೆ ಮಾಡುವ ಪಿ.ಡಿ.ಎಸ್. ಅಕ್ಕಿ ಎಂದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ನಂತರ ಸ್ಥಳಕ್ಕೆ ತೂಕದ ಮೆಷಿನ್ ನನ್ನು ತರಿಸಿಕೊಂಡು ಒಟ್ಟು 28 ಅಕ್ಕಿ ಮೂಟೆಗಳನ್ನು ತೂಕ ಮಾಡಲಾಗಿ ಒಟ್ಟು 7 ಕ್ವಿಂಟಾಲ್ 87 ಕೆ.ಜಿ. ಇರುತ್ತದೆ. ಅದರ ಅಂದಾಜು ಬೆಲೆ ರೂ. 11,805/– ಇರುತ್ತದೆ.

ತಲಾ ಮೂಟೆಗಳಿಂದ 100 ಗ್ರಾಂ ನಷ್ಟು ಅಕ್ಕಿಯನ್ನು ಸ್ಯಾಂಪಲ್ ತೆಗೆದು ಬಿಳಿ ಬಣ್ಣದ ಬಟ್ಟೆ ಚೀಲದಲ್ಲಿ ಹಾಕಿ ಹೊಲಿದು ಸಿ ಎಂಬ ಅಕ್ಷರದಿಂದ ಸೀಲು ಮಾಡಿರುತ್ತೇವೆ. ಸ್ಥಳದಲ್ಲಿ ಮಹಜರ್ ನ್ನು ಬೆ. 11.15 ರಿಂದ 3.00

ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿ ಮುದ್ದೆಮಾಲುಗಳನ್ನು ಹಾಗೂ ಓಮಿನಿ ಕಾರನ್ನು ಅಮಾನತ್ತುಪಡಿಸಿಕೊಳ್ಳಲಾಯಿತು.

ಪಡಿತರ ಅಕ್ಕಿಯನ್ನು ಆರೋಪಿಗಳು ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ಕೇರಳ ರಾಜ್ಯಕ್ಕೆ ತೆಗೆದುಕೊಂಡು ಹೋಗುತ್ತಿದ್ದರು. ನಂತರ ನಾನು ಈ ಬಗ್ಗೆ ದೂರನ್ನು ನೀಡಿರುತ್ತೇನೆ. ಸದರಿ ದೂರನ್ನು ನೋಡುತ್ತಿದ್ದು, ಅದನ್ನು ನಿಪಿ-1 ಎಂದು ಅದರಲ್ಲಿ ಇರುವ ಸಾಕ್ಷಿದಾರರ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಮಹಜರ್ ನ್ನು ನಿಪಿ-2 ಎಂದು ಅದರಲ್ಲಿ ಇರುವ ಸಾಕ್ಷಿದಾರರ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಆ ದಿನ ಸ್ಯಾಂಪಲ್ ಗಾಗಿ ತೆಗೆದ ಅಕ್ಕಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮು.ಮಾ-1 ಎಂದು ಗುರುತಿಸಲಾಯಿತು.

ಆ ದಿನ ಅಕ್ಕಿ ಸಾಗಿಸುತ್ತಿದ್ದ ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. 1ನೇ ಆರೋಪಿ ಈ ದಿನ ನ್ಯಾಯಾಲಯಕ್ಕೆ ಗೈರು ಹಾಜರಿದ್ದು, ಗುರುತಿಸುವಿಕೆಯ ಬಗ್ಗೆ ಯಾವುದೇ 1ನೇ ಆರೋಪಿ ಪರ ವಕೀಲರು ಯಾವುದೇ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

(ಈಹಂತದಲ್ಲಿ ಮಾನ್ಯ ಎಪಿಪಿರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು)

**ಪಾಟೀ ಸವಾಲು ಮಾನ್ಯ ಎಪಿಪಿರವರಿಂದಃ**

ಆ ದಿನ ಮಹಜರ್ ನ್ನು ಬೆ. 11.15 ರಿಂದ 11.50 ಗಂಟೆಯವರೆಗೆ ಮಾಡಲಾಗಿರುತ್ತದೆ ಎಂದರೆ ಸರಿ.

**ಪಾಟೀ ಸವಾಲುಃ 1ನೇ ಆರೋಪಿ ಪರ ಶ್ರೀ ಎಸ್.ಎನ್.ಎನ್. ವಕೀಲರಿಂದಃ**

ನನಗೆ ಆ ದಿನ ಫೋನ್ ಮುಖಾಂತರ ಬಾತ್ಮಿ ಬಂದಿರುತ್ತದೆ. ಬಾತ್ಮಿ ಬಂದಾಗ ಬೆ. 11.00 ಗಂಟೆಯಾಗಿರುತ್ತದೆ. 15 ನಿಮಿಷಗಳ ಅವಧಿಯೊಳಗೆ ಪಿ.ಎಸ್.ಐ ರವರನ್ನು ಭೇಟಿ ಆಗಿರುತ್ತೇನೆ. ನಾನು ನನ್ನ ಮೇಲಾಧಿಕಾರಿಗಳವರಿಗೆ ಮೌಖಿಕ ಈ ವಿಷಯವನ್ನು ತಿಳಿಸಿರುತ್ತೇನೆ. ಈ ವಿಷಯವನ್ನು ನಮ್ಮ ಇಲಾಖೆಯ ಮೂಮೆಂಟ್ ರಿಜಿಸ್ಟರ್ ನಲ್ಲಿ ನಮೂದಿಸಿರುವುದಿಲ್ಲ. ನಾನು, ಪಿ.ಎಸ್.ಐ, ಮೂರು ಜನ ಪಿ.ಸಿ. ರವರು ಸ್ಥಳಕ್ಕೆ ಹೋಗಿರುತ್ತೇವೆ. ನಾವು ಆ ದಿನ ಜೀಪ್ ನ್ನು ಯಾವ ಭಾಗದಲ್ಲಿ ನಿಲ್ಲಿಸಿದ್ದೆವು ಎಂದು ನನಗೆ ಈಗ ನೆನಪಿರುವುದಿಲ್ಲ. ನಾವು ಆ ದಿನ ಯಾವ ದಿಕ್ಕಿನಲ್ಲಿ ನಿಂತುಕೊಂಡಿದ್ದೆವು ಎಂದು ಹೇಳಲು ಬರುವುದಿಲ್ಲ. ಬಿಳಿ ಬಣ್ಣದ ಓಮಿನಿ ಕಾರ್ ಆಗಿರುತ್ತದೆ. ಅಕ್ಕಿಯನ್ನು ಸಾಧಾರಣಾ ಚೀಲದಲ್ಲಿ ತುಂಬಿದ್ದರು. ನಾನು ಮತ್ತು ಪಿ.ಎಸ್.ಐ ರವರು ಕಾರನ್ನು ತಡೆದು ವಿಚಾರಣೆ ಮಾಡಿರುತ್ತೇವೆ. ಪಡಿತರ ಅಕ್ಕಿಯ ಚೀಲದ ಮೇಲೆ ಇಲಾಖಾ ಮೊಹರು ಇರುತ್ತದೆ ಎಂದರೆ ಸರಿ. ಆರೋಪಿಗಳು ತೆಗೆದುಕೊಂಡು ಬರುತ್ತಿದ್ದ ಅಕ್ಕಿ ಮೂಟೆಗಳ ಮೇಲೆ ಇಲಾಖಾ ಮೊಹರು ಇದ್ದಿರುವುದಿಲ್ಲ. ನನ್ನ ದೂರಿನಲ್ಲಿ ಆರೋಪಿಗಳು ಸಾರ್ವಜನಿಕರು ಪಡಿತರ ಅಕ್ಕಿಯನ್ನು ಪಡೆದ ನಂತರ ಅವರಿಂದ ಈ ಅಕ್ಕಿಯನ್ನು ಪಡೆದುಕೊಂಡು ಸಾಗಾಣಿಕೆ ಮಾಡುತ್ತಿದ್ದರು ಎಂಬ ಬಗ್ಗೆ ನಮೂದಿಸಿರುವುದಿಲ್ಲ ಎಂದರೆ ಸರಿ. ಪಡಿತರ ಅಕ್ಕಿ ಎಂದು

ನಿರ್ಧರಿಸಲು ಯಾವುದೇ ಪರೀಕ್ಷೆಯನ್ನು ಮಾಡಿರುವುದಿಲ್ಲ ಎಂದರೆ ಸರಿ. ಯಾವ ಯಾವ ಚೀಲದಲ್ಲಿ ಎಷ್ಟು ಎಷ್ಟು ತೂಕದ ಅಕ್ಕಿ ಇತ್ತು ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ಮುದ್ದೆಮಾಲು 2 ಕೆ.ಜಿ. 800 ಗ್ರಾಂ ಇರುವುದಿಲ್ಲ ಎಂದರೆ ಸರಿ. ನಾವು ಪ್ರತಿ ಅಕ್ಕಿ ಮೂಟೆಯಲ್ಲಿ 100 ಗ್ರಾಂ ಅಕ್ಕಿಯನ್ನು ತೆಗೆದಿರುವುದಿಲ್ಲ ಎಂದರೆ ಸರಿ. ಮುದ್ದೆಮಾಲು 1 ರ ಮೇಲೆ " **ಸಿ** " ಎಂಬ ಅಕ್ಷರ ಇರುವುದಿಲ್ಲ ಎಂದರೆ ಸರಿ.

ಆ ದಿನ ಆರೋಪಿಗಳು 28 ಪಡಿತರ ಅಕ್ಕಿ ಮೂಟೆಗಳನ್ನು ಕಾರಿನಲ್ಲಿ ಸಾಗಾಣಿಕೆ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ ಮತ್ತು ಯಾವುದೇ ಅಕ್ಕಿ ಮೂಟೆ ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಮಹಜರ್ ಸಾಕ್ಷಿದಾರರು ಒಬ್ಬನು ಬೇರಂಬಾಡಿ ಗ್ರಾಮದವರಾಗಿದ್ದು, ಇನ್ನೊಬ್ಬನು ಯಾವ ಗ್ರಾಮದವನು ಎಂದು ಈಗ ನೆನಪಿರುವುದಿಲ್ಲ. ಪೊಲೀಸ್ ಸಿಬ್ಬಂದಿಗಳು ಘಟನಾ ಸ್ಥಳದಲ್ಲಿ ಮಹಜರ್ ಸಾಕ್ಷಿದಾರರನ್ನು ಕರೆತಂದಿರುತ್ತಾರೆ. ಘಟನಾ ಸ್ಥಳದಲ್ಲಿ ಸ್ಯಾಂಪಲ್ ಗಾಗಿ ಮುದ್ದೆಮಾಲು 1 ನ್ನು ತೆಗೆದಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳದ ಚೆಕ್ ಬಂದಿ ಈಗ ನೆನಪಿರುವುದಿಲ್ಲ. ಆರೋಪಿಗಳಿಗೂ ಮತ್ತು ಈ ಅಕ್ಕಿಗೂ ಯಾವುದೇ ಸಂಬಂಧ ಇರದೆ ಇದ್ದರೂ ಸಹ ಆರೋಪಿಗಳ ವಿರುದ್ಧ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ಅಪರಾಧ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇಳಿ ಸರಿ ಇದೆ

ಹಿರಿಯ ಸಿವಿಲ್ ಜಡ್ಜ್ ಜೆಎಂಎಫ್ ಸಿ, ಗುಂಡ್ಲುಪೇಟೆ

ಗುಂಡ್ಲುಪೇಟೆ.